VK ವಿಜಯ ಕರ್ನಾಟಕ

# ಪ್ಲಾಸ್ಟಿಕ್ ತಡೆಯಲು ಶೇ 5ರಷ್ಟು ತೆರಿಗೆ: ಸಿಎಂ

Vijaya Karnataka | Jun 6, 2018, 08.06 AM IST



**ಬೆಂಗಳೂರು:** ಪರಿಸರಕ್ಕೆ ಹಾನಿ ಉಂಟು ಮಾಡುವ ಪ್ಲಾಸ್ಟಿಕ್ ಬಳಕೆ ತಡೆಗಟ್ಟಲು ಶೇ.5ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪವನ್ನು ಸಿಎಂ ಕುಮಾರಸ್ವಾಮಿ ಅವರು ಪ್ರಕಟಿಸಿದರು.

ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಇಲಾಖೆ ಮಂಗಳವಾರ ಆಯೋಜಿಸಿದ್ದ 'ವಿಶ್ವ ಪರಿಸರ ದಿನಾಚರಣೆ' ಉದ್ಘಾಟಿಸಿ ಮಾತನಾಡಿ ''ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರಕ್ಕೆ ಹಾನಿಯಾಗುತ್ತಿದೆ. ಇದನ್ನು ಮನಗಂಡು ನಿಷೇಧ ಹೇರಿದ್ದರೂ, ಪ್ಲಾಸ್ಟಿಕ್ ಬಳಕೆ ನಿಂತಿಲ್ಲ. ಭವಿಷ್ಯದ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ಉತ್ಪನ್ನಗಳ ಮೇಲೆ ಶೇ.5ರಷ್ಟು ತೆರಿಗೆ ವಿಧಿಸಲು ಚಿಂತನೆ ನಡೆದಿದೆ,'' ಎಂದರು.

''ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಕಾಗದ, ಬಟ್ಟೆ ಬ್ಯಾಗ್ ಬಳಕೆಗೆ ಉತ್ತೇಜಿಸಬೇಕಿದೆ. ಜನರಲ್ಲಿ ಇನ್ನಷ್ಟು ಜಾಗೃತಿ ಮೂಡಿಸಲು ಗುಡಿ ಕೈಗಾರಿಕೆ ಅಡಿ ತಯಾರಾಗುವ ಪರಿಸರ ಸ್ನೇಹಿ ಉತ್ಪನ್ನಗಳನ್ನು ಜನರಿಗೆ ತಲುಪಿಸಲು ವಿಶೇಷ ಕ್ರಮ ಕೈಗೊಳ್ಳಲಾಗುವುದು,'' ಎಂದರು.

**ಗಿಡ ನೆಡುವಲ್ಲಿ ಪ್ರಾಮಾಣಿಕತೆ ಇರಲಿ**

''ಪರಿಸರ ರಕ್ಷಣೆಯಲ್ಲಿ ಎಲ್ಲರೂ ಎಡವಿದ್ದೇವೆ. ಸರಕಾರಿ ಲೆಕ್ಕದಲ್ಲಿ ದೊಡ್ಡ ಸಂಖ್ಯೆಯ ಗಿಡ ನೆಡಲಾಗಿದೆ ಎಂದು ನಮೂದಿಸದೆ ಪ್ರಾಮಾಣಿಕವಾಗಿ ಗಿಡ ಬೆಳೆಸುವತ್ತ ಗಮನ ಹರಿಸಬೇಕು. ಇದರಿಂದ ಪರಿಸರ ಅವ್ಯಾಹತವಾಗಿ ಹಾಳಾಗುತ್ತಿದೆ. ಹವಾಮಾನದಲ್ಲೂ ಏರುಪೇರು ಉಂಟಾಗುತ್ತಿದೆ,'' ಎಂದು ಕುಮಾರಸ್ವಾಮಿ ವಿವರಿಸಿದರು.

**ಪ್ರಶಸ್ತಿ ವಿತರಣೆ**

ಪರಿಸರಕ್ಕಾಗಿ ಅವಿರತವಾಗಿ ದುಡಿಯುತ್ತಿರುವ ಐಐಎಸ್ಸಿ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಸಹಿತ ಆರು ಮಂದಿಗೆ ಪರಿಸರ ಪ್ರಶಸ್ತಿ ವಿತರಿಸಲಾಯಿತು. 'ಅತ್ಯುತ್ತಮ ಪರಿಸರ ಮಿತ್ರ ಶಾಲೆ' ಅಡಿ ರಾಜ್ಯದ ಏಳು ವಲಯಗಳ ತಲಾ ಒಂದು ಶಾಲೆಗೆ ಪ್ರಶಸ್ತಿಯನ್ನು ನೀಡಲಾಯಿತು. ಇದೆ ವೇಳೆ ಅರಣ್ಯ ಇಲಾಖೆ ನಿರ್ಮಿತ 'ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿ' ಸಾಕ್ಷ್ಯಚಿತ್ರವನ್ನು ನಟ ದರ್ಶನ್ ಬಿಡುಗಡೆ ಮಾಡಿದರು. ಶಾಸಕ ಡಾ. ಸಿ.ಎನ್.ಅಶ್ವತ್ಥ್‌ನಾರಾಯಣ, ಮೇಯರ್ ಸಂಪತ್‌ರಾಜ್, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಲಕ್ಷ್ಮಣ್, ಪರಿಸರ ಬರಹಗಾರ ನಾಗೇಶ್ ಹೆಗಡೆ, ನಟ ದರ್ಶನ್ ಮತ್ತಿತರರಿದ್ದರು.

**ಸ್ವೆಟರ್‌ನೊಂದಿಗೆ ಜಾಗಿಂಗ್ ನೆನಪಿಸಿದ ಸಿಎಂ**

ಬೆಂಗಳೂರಿನಲ್ಲಿ 70-80ರ ದಶಕದಲ್ಲಿ ಜನರು ಜಾಗಿಂಗ್ ವೇಳೆ ಸ್ವೆಟರ್ ಧರಿಸುತ್ತಿದ್ದರು. ಅಷ್ಟೊಂದು ಹಿತಕರವಾಗಿದ್ದ ಅಂದಿನ ಪರಿಸರವನ್ನು ಇಂದು ಕಾಣಸಲು ಸಾಧ್ಯವಿಲ್ಲ. ಇದಕ್ಕೆ ಅಭಿವೃದ್ಧಿ ಹೆಸರಿನಲ್ಲಿ ಮರಗಳಿಗೆ ಕೊಡಲಿ ಹಾಕಿರುವುದು ಕಾರಣ,'' ಎಂದು ಸಿಎಂ ಕುಮಾರಸ್ವಾಮಿ ತಿಳಿಸಿದರು.